# <u>ರಾಮ ನಾಮನೆಂಬೊ ನಾಮವ ನೆನೆದರೆ</u>

**Note:** These lyrics are obtained from the singer's video. I couldnot find these lyrics in any standard book that I referred.

ರಾಮ ನಾಮನೆಂಬೊ ನಾಮವ ನೆನೆದರೆ ಭಯವಿಲ್ಲಾ ಮನಕೆ
ಮೂರು ಲೋಕಕೆ ಕಾರಣ ಕರ್ತ ನಾರಾಯಣ ಜಗಕೆ || ಪ ||

ಮತ್ಸ್ಯಾವತಾರವ ತಾಳಿದ ರಾಮ ವೇದವ ತರುವುದಕೆ
ಬೆಟ್ಟವ ಬೆನ್ನಲಿ ಪೊತ್ತಿದ ರಾಮ ಕೂರ್ಮಾವತಾರಕ್ಕೆ || 1 ||

ಭೂಮಿಯ ಪೊತ್ತು ನೀರೊಳು ಮುಳುಗಿದ ವರಹಾವತಾರಕ್ಕೆ
ಕರುಳನ ಬಗೆದು ಮಾಲೆಯ ಧರಿಸಿದ ಪ್ರಹ್ಲಾದ ಸಲಹುದಕೆ || 2 ||

ಭೂಮಿಯ ದಾನವ ಬೇಡಿದ ರಾಮ ವಾಮನವತಾರಕ್ಕೆ
ತಾಯಿಯ ಶಿರವನು ಅಳಿದನು ರಾಮ ಭಾರ್ಗವತಾರಕ್ಕೆ || 3 ||

ವನವಾಸವ ಮಾಡಿದ ರಾಮ ಜನಕನ ವಾಕ್ಯಕ್ಕೆ
ಮಾವ ಕಂಸನ ಕೊಂದನು ಕೃಷ್ಣ ತಾಯಿಯ ಬಿಡಿಸಲಿಕ್ಕೇ || 4 ||

ಸತಿಯರ ವ್ರತಗಳ ಕೆಡಿಸಿದ ರಾಮ ತ್ರಿಪುರರ ಸಲಹುದಕೆ
ವಾಹನ ಬಿಟ್ಟು ತುರಗವನೇರಿದ ಕಲ್ಕ್ಯಾವತಾರಕ್ಕೆ || 5 ||

ಶ್ಯಾಮಲ ವರ್ಣವ ತಾಳಿದ ರಾಮ ಸಾಮರ್ಥ್ಯನು ಜಗಕೆ
ಸ್ವಾಮಿ ಶ್ರೀ ಪುರಂದರ ವಿಠಲನು ರಾಮ ಗೋವಿಂದನು ಜಗಕೆ || 6 ||

**Classification:** Keerthane
**Ankita:** sri purandara vittala
**Location:** NA
**Category:** Rama Stuti, Dashavatara
**Sub-Category:** rama, dashavatara, govinda, patni, bhumi, Krishna, kudure, tayi, dAna, Niru, parvata, loka, Narayana, bhaya, mana, kamsa, vrata, kaadu, prahallada,

**Pravachana:** NA

**Explanation:** NA